Series G7DEF

Set – 4

ಪ್ರಶ್ನೆ ಪತ್ರಿಕೆ ಕೋಡ್– ೧೩
Q.P. Code **13**

ಹಾಜರಿ ಸಂಖ್ಯೆ

**Roll No.**

ಅಭ್ಯರ್ಥಿಯು ಪ್ರಶ್ನೆ ಪತ್ರಿಕೆ ಕೋಡ್ ಅನ್ನು ಉತ್ತರ ಪತ್ರಿಕೆ ಮುಖಪುಟದಲ್ಲಿ ಅವಶ್ಯವಾಗಿ ಬರೆಯಿರಿ.
Candidates must write the Q.P. Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಯಥಾಸ್ಥಾನದಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.
- Please check that this question paper contains **15** printed pages.
- Q.P. Code given on the right hand side of the question paper should be written on the title page of the answer-book by the candidate.
- Please check that this question paper contains **15** questions.
- **Please write down the serial number of the question in the answer-book at the given place before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*

## General Instructions :

Read the following instructions carefully :

1. This question paper is divided into **4** Sections. It has total **15** questions.
2. **Section A** : **04** Question No. **1, 2, 3, 4.**
3. **Section B** : **03** Question No. **5, 6, 7.**
4. **Section C** : **03** Question No. **8, 9, 10.**
5. **Section D** : **05** Question No. **11 to 15.**

   Attempt questions as per specific instructions.

   Write Question No. in answer book before attempting it.

## ಸೂಚನೆಗಳು :

**ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಈ ಪ್ರಶ್ನೆ ಪತ್ರಿಕೆಯು ನಾಲ್ಕು **(4)** ವಿಭಾಗಗಳನ್ನು ಒಳಗೊಂಡಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **15** ಪ್ರಶ್ನೆಗಳಿವೆ.
2. **ವಿಭಾಗ A** : **04 ಪ್ರಶ್ನೆ ಸಂಖ್ಯೆ 1, 2, 3, 4.**
3. **ವಿಭಾಗ B** : **03 ಪ್ರಶ್ನೆ ಸಂಖ್ಯೆ 5, 6, 7.**
4. **ವಿಭಾಗ C** : **03 ಪ್ರಶ್ನೆ ಸಂಖ್ಯೆ 8, 9, 10.**
5. **ವಿಭಾಗ D** : **05 ಪ್ರಶ್ನೆ ಸಂಖ್ಯೆ 11 ರಿಂದ 15.**

   ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಉತ್ತರಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.

**PART – 1 : (40 ಅಂಕಗಳು)**

**SECTION – A**

**(Unseen Passage, Seen Prose & Poem)**

**ವಾಚನ ಮತ್ತು ಗ್ರಹಿಕಾ ಕೌಶಲ್ಯ : 20 ಅಂಕಗಳು**

1. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಕೃತಕ ಬುದ್ಧಿಮತ್ತೆ ಇಲ್ಲದೆ ನಮ್ಮ ಜೀವನವನ್ನು ಕಲ್ಪಿಸಿಕೊಳ್ಳುವುದು ಈಗ ಕಷ್ಟ. ಮೊಬೈಲ್ ಫೋನ್‌ಗಳಿಂದ ಸ್ಮಾರ್ಟ್ ಫೋನ್‌ಗಳಿಗೆ ಮತ್ತು ಕಂಪ್ಯೂಟರ್‌ಗಳಿಂದ ಲ್ಯಾಪ್‌ಟಾಪ್‌ಗಳಿಗೆ ನಾವು ಸಾಧಿಸಿರುವ ಪ್ರಗತಿಯನ್ನು ನೋಡಿದರೆ, ಮುಂದೆ ಏನಾಗಲಿದೆ ಎಂದು ನಾವು ಆಶ್ಚರ್ಯಪಡುತ್ತೇವೆ. ಕೃತಕ ಬುದ್ಧಿಮತ್ತೆ ಮಾನವನ ಬುದ್ಧಿಮತ್ತೆಯನ್ನು ಮೀರಬಹುದು ಎಂದು ಊಹಿಸಲಾಗಿದೆ. ಆದಾಗ್ಯು, ಕೃತಕ ಬುದ್ಧಿಮತ್ತೆಯಲ್ಲಿನ ವಿಕಸನವು ಮಾನವನ ಬುದ್ಧಿಮತ್ತೆಯಲ್ಲಿನ ವಿಕಾಸದ ಪರಿಣಾಮವಾಗಿದೆ. ಮಾನವ ಅಸ್ತಿತ್ವವಿಲ್ಲದೆ ಕೃತಕ ಬುದ್ಧಿಮತ್ತೆ ಅಸ್ತಿತ್ವದಲ್ಲಿರಲು ಸಾಧ್ಯವೇ ? ನಾವು ಕೃತಕ ಬುದ್ಧಿಮತ್ತೆಯ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ. ಕೆಲಸ, ಮನರಂಜನೆ, ಅಧ್ಯಯನ ಅಥವಾ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಮತ್ತು ಅದು ಇಲ್ಲದೆ ನಮ್ಮ ಜೀವನವನ್ನು ಇನ್ನು ಮುಂದೆ ಊಹಿಸಲು ಸಾಧ್ಯವಿಲ್ಲ. ಕೃತಕ ಬುದ್ಧಿಮತ್ತೆಯೊಂದಿಗೆ ಮಾನವ ಸಹಯೋಗವು ಅಗಾಧವಾಗಿ ಬೆಳೆದಿದೆ. ಯಂತ್ರಗಳು ನಮ್ಮ ಜೀವನವನ್ನು ಸುಲಭಗೊಳಿಸುತ್ತವೆ. ಆದರೆ ಮನುಷ್ಯರನ್ನು ಬದಲಾಯಿಸಲು ಸಾಧ್ಯವಿಲ್ಲ. ಮಾನವರೆ, ಯಂತ್ರಗಳ ಸೃಷ್ಟಿಕರ್ತರು ಮತ್ತು ನಿರ್ವಾಹಕರು.

ನಾವು ಯಂತ್ರಗಳ ವ್ಯಸನಿಯಾಗಿದ್ದೇವೆ. ಆದರೆ ನಮ್ಮ ಭಾವನಾತ್ಮಕ ಅಗತ್ಯಗಳ ಬಗ್ಗೆ ಯಂತ್ರದೊಂದಿಗೆ ಮಾತನಾಡಬಹುದೇ ? ನಾವು ನಮ್ಮ ಭಾವನೆಗಳನ್ನು ಯಂತ್ರಗಳೊಂದಿಗೆ ಹಂಚಿಕೊಳ್ಳಬಹುದೇ ? ಮಾನವರು ಭಾವನಾತ್ಮಕ ಜೀವಿಗಳು ಮತ್ತು ಹಲವಾರು ಭಾವನಾತ್ಮಕ ಅಗತ್ಯಗಳನ್ನು ಹೊಂದಿರುತ್ತಾರೆ. ಮಾನವನ ಮೆದುಳು ಎಂದಿಗೂ ಯಂತ್ರಗಳಂತೆ ಸ್ಥಿರವಾಗಿರುವುದಿಲ್ಲ. ಮಾನವನ ಮೆದುಳು ಭಾವನೆಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ನಾವು ಸಂವಹನ ನಡೆಸಲು ಬಯಸುವುದು ಮನುಷ್ಯರೊಂದಿಗೆ, ಯಂತ್ರಗಳೊಂದಿಗೆಯಲ್ಲ. ನಮ್ಮ ಶಾಪಿಂಗ್ ಅನುಭವವನ್ನು ಸ್ಥಳೀಯವಾಗಿ ಆನ್‌ಲೈನ್ ಶಾಪಿಂಗ್‌ಗೆ ಬದಲಾಯಿಸಲು ತಂತ್ರಜ್ಞಾನ ಅಸ್ತಿತ್ವದಲ್ಲಿದೆ. ಆದರೆ ಎಲ್ಲರೂ ಇದಕ್ಕೆ ಆದ್ಯತೆ ನೀಡುವುದಿಲ್ಲ. ಕೆಲವು ಜನರು ಮಳಿಗೆಗಳಿಗೆ ವೈಯಕ್ತಿಕವಾಗಿ ಭೇಟಿ ನೀಡಿ, ಆ ಅನುಭವವನ್ನು ಆನಂದಿಸಲು ಇಷ್ಟಪಡುತ್ತಾರೆ. ಒತ್ತಡವನ್ನು ನಿಭಾಯಿಸುವ ವಿಷಯಕ್ಕೆ ಬಂದಾಗ ಒತ್ತಡ ನಿರ್ವಹಣಾ ಸಲಹೆಗಾರರನ್ನು ಸಂಪರ್ಕಿಸಬೇಕು, ಯಂತ್ರಗಳನ್ನಲ್ಲ. ಮನುಷ್ಯರಿಗೆ ಭಾವನೆಗಳಿವೆ ಮತ್ತು ಅವುಗಳನ್ನು ನಿಭಾಯಿಸುವುದು ಉತ್ತಮ ಅನುಭವ. ಮನುಷ್ಯರನ್ನು

ಮೆದುಳಿನಿಂದ ಮಾತ್ರ ನಿಯಂತ್ರಿಸಲಾಗುವುದಿಲ್ಲ ಅವರ ಹೃದಯದಿಂದಲೂ ನಿಯಂತ್ರಿಸಲಾಗುತ್ತದೆ. ಮಾನವನ ಮೆದುಳು ಮತ್ತು ಹೃದಯವು ನಿಕಟ ಸಂಬಂಧವನ್ನು ಹೊಂದಿವೆ. ಇದು ಭಾವನಾತ್ಮಕ ಸಮಗ್ರತೆಯನ್ನು ಸೃಷ್ಟಿಸುತ್ತದೆ. ತಂತ್ರಜ್ಞಾನವು ಕೈಯಲ್ಲಿದೆ ಎಂದ ಮಾತ್ರಕ್ಕೆ ಅದು ಮನುಷ್ಯರನ್ನು ಬದಲಾಯಿಸುತ್ತದೆ ಅಥವಾ ಯಾವಾಗಲೂ ಉತ್ತಮ ಆಯ್ಕೆಯಾಗಿರುತ್ತದೆ ಎಂದರ್ಥವಲ್ಲ.

**ಪ್ರಶ್ನೆಗಳು.**

I. ಕೃತಕ ಬುದ್ಧಿಮತ್ತೆಯಲ್ಲಿನ ವಿಕಸನವು ಮಾನವನ _______ ವಿಕಾಸದ ಪರಿಣಾಮವಾಗಿದೆ.

(A) ತಿಳುವಳಿಕೆಯ (B) ಜ್ಞಾನದ

(C) ಬುದ್ಧಿಮತ್ತೆಯಲ್ಲಿನ (D) ವಿಜ್ಞಾನದ

II. ಮಾನವರೆ, ಯಂತ್ರಗಳ _______.

1. ಸೃಷ್ಟಿಕರ್ತರು 2. ಗ್ರಾಹಕರು 3. ವಾಹಕರು 4. ನಿರ್ವಾಹಕರು

ಸರಿಯಾದ ಗುಂಪು ಆರಿಸಿ.

(A) 1 ಮತ್ತು 2 (B) 1 ಮತ್ತು 3

(C) 2 ಮತ್ತು 3 (D) 1 ಮತ್ತು 4

III. ಹೇಳಿಕೆ - 1 : ಮಾನವನ ಮೆದುಳು ಭಾವನೆಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ.

ಹೇಳಿಕೆ - 2 : ನಾವು ಸಂವಹನ ನಡೆಸಲು ಬಯಸುವುದು ಮನುಷ್ಯರೊಂದಿಗೆ, ಯಂತ್ರಗಳೊಂದಿಗೆಯಲ್ಲ.

ಹೇಳಿಕೆ - 3 : ಮಾನವನ ಮೆದುಳು ಭಾವನೆಗಳಿಂದ ಹೆಚ್ಚು ಪ್ರಭಾವಿತವಾಗಿರುವುದಿಲ್ಲ.

ಸರಿಯಾದ ಗುಂಪು ಆರಿಸಿ.

(A) 1, 2, 3 ಸರಿ (B) 1, 2 ಸರಿ ಮತ್ತು 3 ತಪ್ಪು

(C) 1 ಸರಿ 2 ತಪ್ಪು 3 ಸರಿ (D) 1, 2, 3 ತಪ್ಪು

IV. ಕೆಲವು ಜನರು ಶಾಪಿಂಗ್ ಮಾಲ್‌ಗಳಿಗೆ ವೈಯಕ್ತಿಕವಾಗಿ ಭೇಟಿ ನೀಡಿ, ಆ _______ ಇಷ್ಟಪಡುತ್ತಾರೆ.

(A) ಅನುಭವವನ್ನು ಪಡೆಯಲು (B) ಅನುಭವವನ್ನು ಹಂಚಲು

(C) ಅನುಭವವನ್ನು ಆನಂದಿಸಲು (D) ಅನುಭವವನ್ನು ಗಳಿಸಲು

V. ಮಾನವನ _______ ನಿಕಟ ಸಂಬಂಧ ಹೊಂದಿವೆ.

(A) ಮೆದುಳು ಮತ್ತು ಹೃದಯ (B) ಕಣ್ಣು ಮತ್ತು ಕಿವಿ

(C) ಕಣ್ಣು ಮತ್ತು ಮೆದುಳು (D) ಮೂಗು ಮತ್ತು ಬಾಯಿ

2. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲ ಇವೆಲ್ಲ 'ಕ್ಷಯಿಸುವ ಸಂಪನ್ಮೂಲ'. ಕೋಟ್ಯಾಂತರ ವರ್ಷಗಳ ಹಿಂದೆ ಬೆಳೆದಿದ್ದ ಜೈವಿಕ ದ್ರವ್ಯಗಳು ಭೂಗರ್ಭಕ್ಕೆ ಇಳಿದು, ಕ್ರಮೇಣ ಅಲ್ಲಿನ ಒತ್ತಡ ಮತ್ತು ಶಾಖಕ್ಕೆ ಸಿಕ್ಕು 'ಪಳೆಯುಳಿಕೆ ಇಂಧನ' ಗಳಾಗಿವೆ. ಭೂಮಿಯ ಆಳದಿಂದ ಒಮ್ಮೆ ಇವನ್ನು ಹೊರಕ್ಕೆ ತೆಗೆದರೆ, ಅವು ಅಲ್ಲಿ ಮತ್ತೆ ಭರ್ತಿಯಾಗುವುದಿಲ್ಲ. ತುಸುತುಸುವಾಗಿ ಬಳಸಿದ್ದರೆ ಸಾವಿರಾರು ವರ್ಷಗಳವರೆಗೆ ಅವು ಶಕ್ತಿಯನ್ನು ಕೊಡುತ್ತಿದ್ದವು. ಆದರೆ ಕಳೆದ ಎರಡು ಶತಮಾನಗಳಿಂದ ನಾವು ಹೆಚ್ಚು ಪ್ರಮಾಣದಲ್ಲಿ ಈ ಭೂಗತ ಶಕ್ತಿದ್ರವ್ಯಗಳನ್ನು ಮೇಲಕ್ಕೆ ಎತ್ತಿ ಬಳಸುತ್ತಿದ್ದೇವೆ. ಹೊಸ ಹೊಸ ತೈಲ ನಿಕ್ಷೇಪಗಳನ್ನು ಪತ್ತೆ ಮಾಡುತ್ತ, ದುರ್ಬಳಕೆ ಮಾಡುತ್ತ, ಭವಿಷ್ಯದ ಪರಿವೆಯೇ ಇಲ್ಲದಂತೆ ವರ್ತಿಸುತ್ತಿದ್ದೇವೆ. ಈಗ ಪೆಟ್ರೋಲಿಯಂ ಉತ್ಪಾದನೆಯ ಗರಿಷ್ಠ ಪ್ರಮಾಣವನ್ನು ತಲುಪುತ್ತಿದ್ದೇವೆ.

ಉತ್ಪಾದನೆ ಕಡಿಮೆಯಾದಂತೆಲ್ಲ ಪೆಟ್ರೋಲಿಯಂ ಬೆಲೆ ಏರುತ್ತ ಹೋಗುತ್ತದೆ. ಕೆಳ ವರ್ಗದ, ಅಷ್ಟೇಕೆ ಮಧ್ಯಮ ವರ್ಗದ ಜನರ ಬದುಕು ಕಷ್ಟವಾಗುತ್ತದೆ. ಏಕೆಂದರೆ ಎಲ್ಲ ಸಾಮಗ್ರಿಗಳ ಬೆಲೆ ಏರುತ್ತದೆ. ಜನಸಾಮಾನ್ಯರ ದುಡಿಮೆಯ ಹೆಚ್ಚಿನ ಭಾಗವೆಲ್ಲ ಇದೊಂದೇ ಕಾರಣದಿಂದ ಸೋರಿ ಹೋಗುತ್ತದೆ. ಉತ್ಪಾದನೆ ಕಡಿಮೆ ಆಗದಂತೆ ನೋಡಿಕೊಳ್ಳಲೆಂದು ಉದ್ಯಮಗಳು ಹೆಚ್ಚು ಹೆಚ್ಚು ವಿಧ್ವಂಸಕ ಗಣಿಗಾರಿಕೆಯಲ್ಲಿ ತೊಡಗಬೇಕಾಗುತ್ತದೆ. ಪೆಟ್ರೋಲಿಯಂ ಎಂಬುದು ಇಷ್ಟೆಲ್ಲ ಮಹತ್ವದ ಸಂಪನ್ಮೂಲ ಎಂದೆನಿಸಿದಾಗ, ಅದರ ಮಾಲಿಕರು ತಮಗೆ ಬೇಕೆಂದಾಗ ಅದರ ಬೆಲೆ ಏರಿಸುತ್ತ ನಮ್ಮ ಬದುಕನ್ನು ಸಂಕಷ್ಟಕ್ಕೆ ನೂಕುತ್ತಾರೆ.

ಇಂಥ ಕರಾಳ ದಿನಗಳು ಬರಬಾರದು ಎಂದಿದ್ದರೆ ನಿತ್ಯದ ಅಡುಗೆ, ಸ್ನಾನ, ಮನೆ ಬೆಳಗಿಸಲು ಸಾಧ್ಯವಾದಷ್ಟು ಮಟ್ಟಿಗೆ ಪಳೆಯುಳಿಕೆ ಇಂಧನದ ಮೇಲಿನ ನಮ್ಮ ಅವಲಂಬನೆಯನ್ನು ಕಡಿಮೆ ಮಾಡುತ್ತಾ ಹೋಗಬೇಕು. ಏನಿದು ಅಕ್ಷಯ ಶಕ್ತಿ ? ಬಿಸಿಲಿನಲ್ಲಿ, ಗಾಳಿಯಲ್ಲಿ ಮತ್ತು ಸಮುದ್ರದ ಅಲೆಗಳಲ್ಲಿ ಅಕ್ಷಯ ಶಕ್ತಿಯಿದೆ. ಇವನ್ನು ನಾವು ಎಷ್ಟೇ ಬಳಸಿಕೊಂಡರೂ ಬರಿದಾಗುವುದೇ ಇಲ್ಲ. ಇದಕ್ಕಿಂತ ಮುಖ್ಯ ವಿಚಾರ ಏನೆಂದರೆ, ಇವು ಮಾಲಿನ್ಯವನ್ನಾಗಲೀ, ಭೂಮಿಯ ತಾಪಮಾನವನ್ನಾಗಲೀ ಹೆಚ್ಚಿಸುವುದಿಲ್ಲ.

ಬಿಸಿಲಿನಲ್ಲಿ ಭಾರೀ ಶಕ್ತಿಯಿದೆ. ಅಡುಗೆ ಹಾಗೂ ಸ್ನಾನಕ್ಕೆ ಬೇಕಾದ ಬಿಸಿನೀರನ್ನು ಬಿಸಿಲಿನಿಂದಲೇ ಪಡೆಯಬಹುದು. ಅಂಥದ್ದೊಂದು ಮೌನಕ್ರಾಂತಿ ಬೆಂಗಳೂರಿನಲ್ಲಿ ನಡೆದಿದೆ. ದೇಶದ ಇತರ ಯಾವುದೇ ಭಾಗಕ್ಕೆ ಹೋಲಿಸಿದರೆ, ಇಲ್ಲಿ ಅತಿ ಹೆಚ್ಚು ಸೋಲಾರ್ ವಾಟರ್ ಹೀಟರ್‌ಗಳು ಇವೆ. ಬಹುತೇಕ ಯಾರ ಮನೆಯ ಭಾವಣಿಯ ಮೇಲೆ ನೋಡಿದರೂ ಸೋಲಾರ್ ವಾಟರ್ ಹೀಟರ್ ಕಾಣುತ್ತದೆ. ಇಂಥ ಹೀಟರ್‌ಗಳಿಂದಾಗಿ

ಜೋಗದ ಜಲವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ಸುಮಾರು ಎರಡು ತಾಸುಗಳ 1400 ಮೆಗಾವ್ಯಾಟ್ ವಿದ್ಯುತ್ ಶಕ್ತಿಯ ಉಳಿತಾಯವಾಗುತ್ತಿದೆ.

ಭೂಮಿಯ ಎಲ್ಲಾ ಜನರಿಗೆ ಒಂದಿಡೀ ವರ್ಷಕ್ಕೆ ಬೇಕಾಗುವಷ್ಟು ಶಕ್ತಿಯನ್ನು ಸೂರ್ಯ ಈ ಭೂಮಿಯ ಮೇಲೆ ಕೇವಲ ಒಂದೇ ಗಂಟೆಯಲ್ಲಿ ಸುರಿಸುತ್ತಾನೆ. ಭಾರತದಲ್ಲಿ ಪ್ರತಿದಿನ ಪ್ರತಿ ಚದರ ಮೀಟರ್ ಸ್ಥಳದಲ್ಲಿ ಸರಾಸರಿ 500 ವ್ಯಾಟ್ ಶಕ್ತಿ ಬಿಸಿಲ ರೂಪದಲ್ಲಿ ಬೀಳುತ್ತಿದೆ. ಈ ಲಭ್ಯವಿರುವ ತಂತ್ರಜ್ಞಾನದಿಂದ ಅದರ ಶೇಕಡಾ 10-15 ರಷ್ಟನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಬಹುದು. ಆದರೆ ಅಂಥ ಅಲ್ಪ ಮೊತ್ತವೂ ಅದ್ಭುತವೇ. ಏಕೆಂದರೆ, ಶತಮಾನಗಳ ಕಾಲ ಇದನ್ನು ಕಡೆಗಣಿಸಿ, ಶಕ್ತಿಗಾಗಿ ಇಡೀ ಮನುಕುಲವೇ ತಪ್ಪು ದಾರಿಯಲ್ಲಿ ಸಾಗಿತ್ತಲ್ಲ.

**ಪ್ರಶ್ನೆಗಳು .**

I. ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲ ಇವೆಲ್ಲ _______ ಸಂಪನ್ಮೂಲ.

(A) ಅಕ್ಷಯಿಸುವ (B) ಕ್ಷಯಿಸುವ

(C) ಕ್ಷೀಣಿಸುವ (D) ವೃದ್ಧಿಸುವ

II. ಪೆಟ್ರೋಲಿಯಂನ ಬೆಲೆ ಏರುತ್ತ ಹೋದಂತೆ _______ ವರ್ಗದ ಜನರ ಬದುಕು ಕಷ್ಟವಾಗುತ್ತದೆ.

(A) ಕೆಳ – ಮೇಲ್ (B) ಮಧ್ಯಮ – ಮೇಲ್

(C) ಕೆಳ – ಮಧ್ಯಮ (D) ಮೇಲ್ – ಮಧ್ಯಮ

III. _______ ಅಕ್ಷಯ ಶಕ್ತಿಯಿದೆ.

(A) ಬಿಸಿಲಿನಲ್ಲಿ (B) ಗಾಳಿಯಲ್ಲಿ

(C) ಸಮುದ್ರ ಅಲೆಗಳಲ್ಲಿ (D) ಎಲ್ಲವೂ ಸರಿ

IV. ಅಡುಗೆ ಹಾಗೂ ಸ್ನಾನಕ್ಕೆ ಬೇಕಾದ ಬಿಸಿನೀರನ್ನು ಬಿಸಿಲಿನಿಂದಲೇ ಪಡೆದ ಮೌನಕ್ರಾಂತಿ ______ ನಡೆದಿದೆ.

(A) ಮಂಗಳೂರಿನಲ್ಲಿ (B) ಮೈಸೂರಿನಲ್ಲಿ

(C) ಬೆಂಗಳೂರಿನಲ್ಲಿ (D) ಬೀದರಿನಲ್ಲಿ

V. ಭಾರತದಲ್ಲಿ ಪ್ರತಿದಿನ ಪ್ರತಿ ಚದರ ಮೀಟರ್ ಸ್ಥಳದಲ್ಲಿ ಸರಾಸರಿ _______ ಶಕ್ತಿ ಬಿಸಿಲ ರೂಪದಲ್ಲಿ ಬೀಳುತ್ತದೆ.

(A) 600 ವ್ಯಾಟ್ (B) 500 ಕಿಲೋ ವ್ಯಾಟ್

(C) 5000 ವ್ಯಾಟ್ (D) 500 ವ್ಯಾಟ್

3. ಕೆಳಗೆ ಕೊಟ್ಟಿರುವ ಸಾ.ರಾ. ಅಬೂಬಕ್ಕರ್ ಅವರು ಬರೆದಿರುವ 'ಯುದ್ಧ' ಪಾಠದ ಪರಿಚಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

"ಡಾಕ್ಟರ್! ರೇಡಿಯೋ ಸಮವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ ?" ವಿಮಾನದ ಪೈಲಟ್ ನುಡಿದನು.

"ಇದು ನಮ್ಮ ಪ್ರದೇಶವೇ, ವೈರಿಗಳ ಪ್ರದೇಶವೇ ಎಂದು ಕೂಡಾ ಗೊತ್ತಾಗ್ತಾ ಇಲ್ಲ. ಹೇಗಾದರೂ ನೆಲ ಮುಟ್ಟಿದ್ದರೆ ಸಾಕಾಗಿತ್ತು" ಎನ್ನುತ್ತಾ ರಾಹಿಲ್ ತನ್ನ ಕೈಯಲ್ಲಿದ್ದ ಔಷಧ ಮತ್ತು ತುರ್ತು ಪರಿಸ್ಥಿತಿಗೆ ಬೇಕಾದ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಇನ್ನಷ್ಟು ಭದ್ರವಾಗಿ ಹಿಡಿದುಕೊಂಡನು. ಅಷ್ಟರಲ್ಲಿ ವಿಮಾನ ಭಯಂಕರ ಶಬ್ದದೊಡನೆ ಸ್ಫೋಟಿಸಿ ನೂರಾರು ಹೋಳುಗಳಾಗಿ ಚದುರಿಬಿತ್ತು.

ನೀರಿನಾಳದಲ್ಲಿ ಎಚ್ಚರಗೊಂಡ ಡಾಕ್ಟರ್ ರಾಹಿಲ್ ಕಷ್ಟಪಟ್ಟು ಮೇಲೆ ಬಂದನು. ಒಂದು ಕಾಲನ್ನು ಅಲುಗಿಸಲಾಗದಿದ್ದರೂ ಹೇಗೋ ಈಜತೊಡಗಿದನು. ತಾನು ತೀರದ ಕಡೆಗೆ ಹೋಗುತ್ತಿದ್ದೇನೆಯೇ ಅಥವಾ ಸಾಗರದ ಕಡೆಗೆ ಹೋಗುತ್ತಿದ್ದೇನೆಯೇ ಗೊತ್ತಾಗುತ್ತಿರಲಿಲ್ಲ. ಸೈನಿಕ ಉಡುಪಿನಲ್ಲಿ ಈಜಲು ಬಹಳ ತೊಂದರೆಯಾಗುತ್ತಿತ್ತು. ಬಹಳ ಹೊತ್ತು ಈಜಿ ಕೈ ಸೋತು ಇನ್ನೇನು ಮುಳುಗುವುದೇ ಎಂದು ಹತಾಶೆಯಿಂದ ಕೊನೆಯ ಬಾರಿ ತಲೆ ಎತ್ತಿದಾಗ ಕಣ್ಣು ಕೋರೈಸುವ ಮಿಂಚೊಂದು ಮಿಂಚಿ ಸಮೀಪದಲ್ಲೇ ತೀರವಿರುವುದನ್ನು ಪರಿಚಯಿಸಿತು. ಕಿವಿಗಡಚಿಕ್ಕುವ ಗುಡುಗೊಂದು ಹಿಂಬಾಲಿಸಿತು.

ತೀರ ಕಣ್ಣಿಗೆ ಬಿದ್ದೊಡನೆ ರಾಹಿಲನ ದೇಹದಲ್ಲಿ ಹೊಸರಕ್ತ ಸಂಚಾರವಾದಂತಾಗಿ ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಬಲವಾಗಿ ಎರಡು ಕೈಗಳಿಂದಲೂ ನೀರನ್ನು ಹಿಂದಕ್ಕೆ ತಳ್ಳುತ್ತಾ ದಡ ಸೇರಿ ದೀರ್ಘವಾದ ನಿಟ್ಟುಸಿರು ಬಿಟ್ಟನು. ದಡ ಸೇರಿಯಾಯಿತು. ಆದರೆ ಈ ನೆಲ ಯಾರಿಗೆ ಸೇರಿದ್ದು ? ತನ್ನನ್ನು ಹಿಡಿದು ಕೊಲ್ಲುವವರಿಗೊ ? ಅಥವಾ ತನ್ನನ್ನು ಬದುಕಿಸಿ ರಕ್ಷಣೆ ನೀಡುವವರಿಗೊ ?

ಆತನು ಎದ್ದು ನಿಲ್ಲಲು ಪ್ರಯತ್ನಿಸಿದನು. ಉಹುಂ ಒಂದು ಕಾಲು ಅಸಾಧ್ಯವಾದ ನೋವಿನಿಂದ ತತ್ತರಿಸಿತು. ಆತನು ಅಲ್ಲೆ ಕುಸಿದು ಕುಳಿತನು. ಈವರೆಗೆ ಈಜಿದ್ದೇ ಅದ್ಭುತವೆನ್ನಿಸಿತು. ಮುಂದೇನು ? ಮಿಂಚು ಮತ್ತೊಮ್ಮೆ ಮಿಂಚಿತು. ಆ ಬೆಳಕಿನಲ್ಲಿ ಕಣ್ಣಿಗೆ ಬಿತ್ತು ಸಾಮಾನ್ಯವಾದೊಂದು ಒಂಟಿ ಮನೆ.

ಧಾರಾಕಾರವಾಗಿ ಸುರಿಯುತ್ತಿರುವ ಈ ಮಳೆಯಿಂದ ಮೊದಲು ರಕ್ಷಣೆ ಪಡೆಯಬೇಕು. ಮುರಿದು ಹೋದ ಕಾಲಿನ ಆರೈಕೆಯಾಗಬೇಕು. ಆತನು ಕತ್ತಲಲ್ಲೆ ತೆವಳತೊಡಗಿದನು ? ಒಂದಷ್ಟು ದೂರ ಚಲಿಸಿದ್ದನೋ ಇಲ್ಲವೋ ಮಹಿಳೆಯೊಬ್ಬಳ ಆರ್ತನಾದ ಆ ಮಳೆಯ ಶಬ್ದವನ್ನೂ ಭೇದಿಸಿ ಆತನ ಕಿವಿಯೊಳಗೆ ನುಗ್ಗಿತು. ಆತನು ಬೆಚ್ಚಿದನು. ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆಗೆ ಹಾಯುತ್ತಿರಲಿಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ?

**ಪ್ರಶ್ನೆಗಳು.**

I. ಪೈಲಟ್ ರಾಹಿಲ್ ನಿಗೆ ಏನು ಹೇಳಿದನು ?

II. ರಾಹಿಲ್ ನು ಏನನ್ನು ಭದ್ರವಾಗಿ ಹಿಡಿದುಕೊಂಡನು ?

III. ತೀರ ಕಣ್ಣಿಗೆ ಬಿದ್ದಾಗ ರಾಹಿಲ್ ನಿಗೆ ಏನಾಯಿತು ?

IV. ರಾಹಿಲನು ಬೆಚ್ಚಲು ಕಾರಣವೇನು ?

V. ಬ್ಲಾಕ್ ಔಟ್ ನಿಯಮವನ್ನು ಏಕೆ ಪಾಲಿಸಲಾಗುತ್ತದೆ ?

4. ಕೆಳಗೆ ಕೊಟ್ಟಿರುವ ಜಿ.ಎಸ್. ಶಿವರುದ್ರಪ್ಪ ಅವರು ಬರೆದಿರುವ ಸಂಕಲ್ಪಗೀತೆ ಪರಿಚಿತ ಪದ್ಯವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ ||೧||

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ ||೨||

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ ||೩||

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ – ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ ||೪||

**ಪ್ರಶ್ನೆಗಳು.**

I. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?

II. ನದಿಜಲಗಳು ಏನಾಗಿವೆ ?

III. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

IV. ಯಾರ ನಡುವೆ ಸೇತುವೆ ಕಟ್ಟಬೇಕಿದೆ ?

V. ಯಾವ ಎಚ್ಚರದೊಳು ಬದುಕಬೇಕಿದೆ ?

## SECTION – B
## (Grammar, Non detailed Portion)
### ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ : 20 ಅಂಕಗಳು

5. ಕೆಳಗಿನ ಪ್ರತಿಯೊಂದು ಬಹು ಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **10 × 1 = 10**

I. ಕೆಳಗೆ ಕೊಟ್ಟಿರುವ ಸಂಧಿ ಮತ್ತು ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | | | |
|---|---|---|---|
| a. | ಬೆಂಬತ್ತು | 1. | ಲೋಪ ಸಂಧಿ |
| b. | ನಿಂತಿರ್ದನು | 2. | ಗುಣ ಸಂಧಿ |
| c. | ಜ್ಞಾನೇಶ್ವರ | 3. | ವೃದ್ಧಿ ಸಂಧಿ |
| d. | ಏಕೈಕ | 4. | ಜಶ್ತ್ವ ಸಂಧಿ |
| | | 5. | ಆದೇಶ ಸಂಧಿ |

ಸರಿಯಾದ ಗುಂಪು ಆರಿಸಿ.

(A) a – 5 b – 4 c – 1 d – 2
(B) a – 5 b – 1 c – 2 d – 4
(C) a – 4 b – 3 c – 5 d – 1
(D) a – 3 b – 2 c – 4 d – 5

II. ತಪಸ್ವಿ – ಪ್ರಸಾದ , ಈ ಪದಗಳ ತದ್ಭವ ರೂಪಗಳು

(A) ತಪಸ್ವಿ – ಹಸಾದ
(B) ತವಸಿ – ಪ್ರಸಾದ
(C) ತವಸಿ – ಹಸಾದ
(D) ತಪಸ್ವಿನಿ – ಆಶೀರ್ವಾದ

III. ಕೆಳಗೆ ಕೊಟ್ಟಿರುವ ಸಮಾಸ ಪದ ಮತ್ತು ಸಮಾಸಗಳನ್ನು ಹೊಂದಿಸಿ ಬರೆಯಿರಿ.

| | | | |
|---|---|---|---|
| a. | ಗಿರಿವನದುರ್ಗ | 1. | ಕ್ರಿಯಾ ಸಮಾಸ |
| b. | ಹೊಗೆದೋರು | 2. | ದ್ವಿಗು ಸಮಾಸ |
| c. | ಮೇಲ್ವಾತು | 3. | ದ್ವಂದ್ವ ಸಮಾಸ |
| d. | ಮೂಗಾವುದ | 4. | ಕರ್ಮಧಾರಯ ಸಮಾಸ |
| | | 5. | ಅಂಶೀ ಸಮಾಸ |

ಸರಿಯಾದ ಗುಂಪು ಆರಿಸಿ.

(A) a – 3 b – 5 c – 2 d – 1
(B) a – 5 b – 1 c – 4 d – 2
(C) a – 2 b – 4 c – 5 d – 3
(D) a – 3 b – 1 c – 4 d – 2

IV. ಬಿಟ್ಟುಬಿಡದೆ ರಪರಪನೆ ಸುರಿದ ಮಳೆಯಿಂದ ಕೆರೆಕಟ್ಟೆಗಳು ತುಂಬಿದವು – ಇಲ್ಲಿರುವ ಅನುಕರಣಾವ್ಯಯ ಗುರುತಿಸಿ ಬರೆಯಿರಿ.

(A) ಬಿಟ್ಟುಬಿಡದೆ (B) ರಪರಪ

(C) ಕೆರೆಕಟ್ಟೆ (D) ಮಳೆಯಿಂದ

V. ಉರ್ವಿ – ಪದದ ಅರ್ಥ

(A) ಭೂಮಿ (B) ಆಕಾಶ (C) ಸಮುದ್ರ (D) ಸರೋವರ

VI. ತಾವು ಯಾವೂರಿನವರೆಂದಾಗ, ಅವರು, ನಾವು ಮೈಸೂರಿನವರೆಂದರು – ಇಲ್ಲಿರುವ ಆತ್ಮಾರ್ಥಕ ಸರ್ವನಾಮ

(A) ನಾವು (B) ಮೈಸೂರು

(C) ಅವರು (D) ತಾವು

VII. ಅವನ ಅಣ್ಣಂದಿರು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇದ್ದಾರೆ – ಪ್ರಥಮಾ ವಿಭಕ್ತಿಯಿಂದ ಕೂಡಿರುವ ಪದ

(A) ಅವನ (B) ದೊಡ್ಡ

(C) ಅಣ್ಣಂದಿರು (D) ಹುದ್ದೆಗಳಲ್ಲಿ

VIII. ಸುಂದರ ವಿಗ್ರಹವನ್ನು ಕೆತ್ತಲು ಮೂವರು ಶಿಲ್ಪಿಗಳು ಆರು ತಿಂಗಳು ತೆಗೆದುಕೊಂಡರು – ಇಲ್ಲಿರುವ ಸಂಖ್ಯೇಯ ವಾಚಕ

(A) ಮೂವರು (B) ಕೆತ್ತಲು

(C) ಸುಂದರ (D) ಆರು

IX. ಆ ರಾಜನ ಆಸ್ಥಾನವನ್ನು ಹಲವು ಮಂದಿ ವಿದ್ವಾಂಸರು ಅಲಂಕರಿಸಿದ್ದರು – ಇಲ್ಲಿರುವ ಅನ್ವರ್ಥಕನಾಮ

(A) ಹಲವು (B) ವಿದ್ವಾಂಸ

(C) ಮಂದಿ (D) ಆ

X. ಪ್ರಾಮಾಣಿಕ – ವಿಕೇಂದ್ರೀಕರಣ – ಈ ಪದಗಳ ವಿರುದ್ಧ ಪದಗಳು

(A) ಅಪ್ರಾಮಾಣಿಕ – ಕೇಂದ್ರೀಕರಣ (B) ಕೇಂದ್ರೀಕರಣ – ಮಾಣಿಕ

(C) ಅಪ್ರಾಮಾಣಿಕ – ವಿಕೇಂದ್ರೀಕರಣ (D) ಮಾಣಿಕ – ಸಕೇಂದ್ರೀಕರಣ

6. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. **5 × 1 = 5**

I. ಪ್ರವಾಸಿಗರು, ಹಳೇಬೀಡು – ಬೇಲೂರಿನಲ್ಲಿರುವ ದೇವಾಲಯಗಳನ್ನು ನೋಡಿ ಮೂಕವಿಸ್ಮಿತರಾಗುವರು. ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ.

II. ಕವಿಗಳ ವಾಣಿಯಿಂದ ಕನ್ನಡದ ವೀಣೆಯು ಮಧುರವಾಗಿ ಮಿಡಿಯಿತು – ವಿಧ್ಯರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

III. ಲೇಖಕರು ಟೊಪ್ಪಿಗೆಯ ವಿಶೇಷತೆಯನ್ನು ಸೊಗಸಾಗಿ ದಾಖಲಿಸಿದ್ದಾರೆ – ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

IV. ಈ ಕೆಳಗಿನ ಗಾದೆ ಮಾತಿನ ಅರ್ಥವನ್ನು ಬರೆಯಿರಿ.

(a) ತುಂಬಿದ ಕೊಡ ತುಳುಕುವುದಿಲ್ಲ

**ಅಥವಾ (OR)**

(b) ಆಪತ್ತಿಗಾದವನೆ ನೆಂಟ

V. ಘಾಸಿಗೊಳಿಸು – ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.

7. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **5 × 1 = 5**

I. ಬಾಗಿಲಲಿ ಬಳುಕುತ್ತಿರುವುದು _______ ಎಲೆಯ ತೋರಣ.

(A) ಬೇವಿನ (B) ಹಲಸಿನ

(C) ಆಲದ (D) ಮಾವಿನ

II. ಬಾಲ ರವಿ ಎಲ್ಲಿ ಥಳಥಳಿಸುತ್ತಿದ್ದಾನೆ ?

(A) ರಂಗೋಲಿಯಲಿ (B) ಗೋಡೆಯ ಮೇಲೆ

(C) ನೀರಿನಲ್ಲಿ (D) ಆಕಾಶದಲ್ಲಿ

III. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ?

(A) ಚೆನ್ನಕೇಶವ (B) ಗುಹೇಶ್ವರ

(C) ಚನ್ನಮಲ್ಲಿಕಾರ್ಜುನ (D) ಕೂಡಲ ಸಂಗಮದೇವ

IV. ಪೌರ ಸ್ವಾತಂತ್ರ್ಯ _______ ಅಂಶಗಳನ್ನು ಹೊಂದಿರುತ್ತದೆ.

(A) ಎರಡು (B) ಮೂರು

(C) ನಾಲ್ಕು (D) ಐದು

V. ಚಂದನವ ಕಡಿದು ಕೊರೆದು ತೇಯ್ದರೂ _______ ಬಿಡದು.

(A) ಕಂಪ (B) ಬಣ್ಣ

(C) ರುಚಿ (D) ಆಕಾರ

## PART – 2 : (40 ಅಂಕಗಳು)

## SECTION – C (Writing Skill)

**ಬರವಣಿಗೆ ಕೌಶಲ್ಯ : 12 ಅಂಕಗಳು**

8. (a) ವಿಶ್ವ ಪರಿಸರ ದಿನಾಚರಣೆಗಾಗಿ ವಿವಿಧ ಪ್ರಕಾರದ ಸಸಿಗಳನ್ನು ಒದಗಿಸಬೇಕೆಂದು ವಿನಂತಿಸಿಕೊಂಡು ವಲಯ ಅರಣ್ಯಾಧಿಕಾರಿಗಳಿಗೆ ಪತ್ರ ಬರೆಯಿರಿ. **1 × 4 = 4**

**ಅಥವಾ (OR)**

(b) ದಿನಾಂಕ 1-2-2026 ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಪ್ರಕಟಣೆಯ ಮೇರೆಗೆ ಅಧ್ಯಕ್ಷರು, ನಮ್ಮೂರ ಪ್ರೌಢಶಾಲೆ, ಕೊಪ್ಪಳ ಇಲ್ಲಿಗೆ ಕೌನ್ಸಿಲರ್ ಹುದ್ದೆಗೆ ಅರ್ಜಿ ಸಲ್ಲಿಸಿ.

9. ನಾಕುತಂತಿ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಸಂದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಿಮ್ಮ ಶಾಲೆಯಲ್ಲಿ ಆಯೋಜಿಸಿದ್ದ ದ.ರಾ. ಬೇಂದ್ರೆಯವರ ಮೂರ್ತಿ ಅನಾವರಣ ಕಾರ್ಯಕ್ರಮದ ವರದಿಯನ್ನು ತಯಾರಿಸಿ. **1 × 4 = 4**

10. ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ. **1 × 4 = 4**

I. ಅಕ್ಷರ ದಾಸೋಹದ ಮಹತ್ವ

II. ವಿದ್ಯಾರ್ಥಿ ಜೀವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವ

III. ಗ್ರಂಥಾಲಯಗಳ ಮಹತ್ವ

## SECTION – D (Descriptive type)

**ಪಠ್ಯಗಳ ಅಧ್ಯಯನ : 28 ಅಂಕಗಳು**

11. ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರಿಸಿ. **4 × 2 = 8**

    I. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

    II. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?

    III. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

    IV. ಭಗತ್ ಸಿಂಗ್, ಜಲಿಯನ್ ವಾಲಾಬಾಗ್ ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ ?

12. ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ. **2 × 3 = 6**

    I. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

    II. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ. **2 × 3 = 6**

    I. (a) ಸಾಮಾಜಿಕ ಕಾನೂನುಗಳ ಹರಿಕಾರ

    **ಅಥವಾ (OR)**

    (b) ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು

    II. (a) ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು

    **ಅಥವಾ (OR)**

    (b) ನಿನ್ನಪದೆಸೆಯ ಬಯಸುವವನಲ್ಲ

14. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

(a) ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

**ಅಥವಾ (OR)**

(b) ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ ಬರೆಯಿರಿ.

15. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

(a) ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಅಥವಾ (OR)**

(b) 'ಹಸುರು' ಕವನದ ರಿತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ ಬರೆಯಿರಿ.

---